**ಸಾಧನೆಗೆ ಸಂದ ಗೌರವ** ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಮುಕುಟಕ್ಕೆ ಗರಿ

# ಭಂಡಾರಿ ಫೌಂಡೇಷನ್‌ಗೆ ಸಂಶೋಧನಾ ಸಂಸ್ಥೆ ಮಾನ್ಯತೆ

• **ಕನ್ನಡಪ್ರಭ ವಾರ್ತೆ** ಮಂಗಳೂರು



■ **ಭಂಡಾರಿ ಫೌಂಡೇಷನ್ ಇದರ ಘಟಕವಾದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಆಯೋಜಿಸಲಾದ ವೈಜ್ಞಾನಿಕ ಮತ್ತು ಕೈಗಾರಿಕಾ-ಆಧಾರಿತ ಚಟುವಟಿಕೆಗಳು, ಸಂಶೋಧನಾ-ಆಧಾರಿತ ಬೋಧನೆ ಮತ್ತು ತರಬೇತಿ ಕಾರ್ಯಕ್ರಮಗಳು, ವಿವಿಧ ಸರ್ಕಾರಗಳ ಹಣಕಾಸಿನ ನೆರವಿನೊಂದಿಗೆ ಕೈಗೊಂಡ ಯೋಜನೆಗಳು. ಡಿಎಸ್ಟಿ / ಎಐಸಿಟಿಇ / ಡಿಆರ್‌ಡಿಒ / ವಿಜಿಎಸ್ಟಿ ಮತ್ತು ಇತರ ಕೈಗಾರಿಕೆಗಳಿಂದ ಹಾಗೂ ಸಂಸ್ಥೆ ಸಲ್ಲಿಸಿದ ಪೇಟೆಂಟ್, ಕೈಗಾರಿಕಾ ಮತ್ತು ಉದ್ಯಮಶೀಲ ಚಟುವಟಿಕೆಗಳನ್ನು ಮತ್ತು ಈ ಸಂಸ್ಥೆಯ ಪ್ರಗತಿಯ ಮೈಲಿಗಲ್ಲುಗಳನ್ನು ಗಮನಿಸಿ ಮಾನ್ಯತೆ ದೊರಕಿದೆ.**

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ಡಿಎಸ್ಟಿ), ಭಾರತ ಸರ್ಕಾರ ಇವರಿಂದ ಭಂಡಾರಿ ಫೌಂಡೇಷನ್‌ಗೆ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ ಎಂದು ಮಾನ್ಯತೆ ಪಡೆದಿದೆ.

ಭಂಡಾರಿ ಫೌಂಡೇಷನ್ ಇದರ ಘಟಕವಾದ ಸಹ್ಯಾದ್ರಿ ಕಾಲೇಜಿನಲ್ಲಿ ನಡೆಸಿದ ಕೈಗಾರಿಕಾ ಸಂಶೋಧನಾ ಕಾರ್ಯಕ್ರಮಗಳ ಆಧಾರದ ಮೇಲೆ ಮತ್ತು ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮೆನೇಜ್‌ಮೆಂಟ್ ಒದಗಿಸಿದ ಎಲ್ಲ ಅಭಿವೃದ್ಧಿ, ಮೂಲಸೌಕರ್ಯ ಸೌಲಭ್ಯಗಳು, ಕೈಗೊಂಡ ಕಾರ್ಯಗಳು ಮತ್ತು ಭಂಡಾರಿ ಪ್ರತಿಷ್ಠಾನದ ಸಮಾಜವೃದ್ಧಿ ಕಾರ್ಯಗಳನ್ನು ಗಮನಿಸಿ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ ಎಂದು ಮಾನ್ಯತೆ ಮಾಡಿದ್ದಾರೆ.

ಭಂಡಾರಿ ಫೌಂಡೇಷನ್ ಇದರ ಘಟಕವಾದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಆಯೋಜಿಸಲಾದ ವೈಜ್ಞಾನಿಕ ಮತ್ತು ಕೈಗಾರಿಕಾ-ಆಧಾರಿತ ಚಟುವಟಿಕೆಗಳು, ಸಂಶೋಧನಾ-ಆಧಾರಿತ ಬೋಧನೆ ಮತ್ತು ತರಬೇತಿ ಕಾರ್ಯಕ್ರಮಗಳು, ವಿವಿಧ ಸರ್ಕಾರಗಳ ಹಣಕಾಸಿನ ನೆರವಿನೊಂದಿಗೆ ಕೈಗೊಂಡ ಯೋಜನೆಗಳು. ಡಿಎಸ್ಟಿ / ಎಐಸಿಟಿಇ / ಡಿಆರ್‌ಡಿಒ / ವಿಜಿಎಸ್ಟಿ ಮತ್ತು ಇತರ ಕೈಗಾರಿಕೆಗಳಿಂದ ಹಾಗೂ ಸಂಸ್ಥೆ ಸಲ್ಲಿಸಿದ ಪೇಟೆಂಟ್, ಕೈಗಾರಿಕಾ ಮತ್ತು ಉದ್ಯಮಶೀಲ ಚಟುವಟಿಕೆಗಳನ್ನು ಮತ್ತು ಈ ಸಂಸ್ಥೆಯ ಪ್ರಗತಿಯ ಮೈಲಿಗಲ್ಲುಗಳನ್ನು ಗಮನಿಸಿ ಮಾನ್ಯತೆ ದೊರಕಿದೆ.

2002ರಲ್ಲಿ ಸ್ಥಾಪನೆಯಾದ ಭಂಡಾರಿ ಫೌಂಡೇಷನ್, ಅಲ್ಪಾವಧಿಯಲ್ಲಿಯೇ ಶಿಕ್ಷಣ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಒಂದು ಉದ್ಯಮಶೀಲ ಶೈಕ್ಷಣಿಕ ಘಟಕವಾಗಿ ಹೊರಹೊಮ್ಮಿದೆ.

ಅಧ್ಯಕ್ಷ ಮಂಜುನಾಥ ಭಂಡಾರಿ ಅವರ ಉತ್ತಮ ಆಲೋಚನೆಗಳು ಶಿಕ್ಷಣ ಜಗತ್ತಿಗೆ ಹೊಸ ಆಯಾಮವನ್ನು ನೀಡಿವೆ. ಮಂಗಳೂರಿನ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಭಂಡಾರಿ ಫೌಂಡೇಷನ್ ಆಶ್ರಯದಲ್ಲಿ 2007ರಲ್ಲಿ ಸ್ಥಾಪಿಸಲಾದ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಶಿಕ್ಷಣ ಕ್ಷೇತ್ರದಲ್ಲಿ ಒಂದು ಮಹತ್ತರ ಸಾಧನೆಯನ್ನು ಮಾಡಿದೆ. ಸಹ್ಯಾದ್ರಿ ಸಂಸ್ಥೆಯು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಸಹ್ಯಾದ್ರಿ ಕಾಲೇಜ್ ಶಿಕ್ಷಣ ಸಂಸ್ಥೆಯು ತಾಂತ್ರಿಕ ಮತ್ತು ನಿರ್ವಹಣಾ ಅಧ್ಯಯನದಲ್ಲಿ ಸಮರ್ಥ ಸಂಶೋಧನೆಯಿಂದ ನಡೆಸಲ್ಪಡುವ ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸುವುದು ಇದರ ಧ್ಯೇಯವಾಗಿದೆ. ಸಹ್ಯಾದ್ರಿ ಸಂಸ್ಥೆಯು ಎಲ್ಲ ಕ್ಷೇತ್ರಗಳಲ್ಲಿಯೂ ಅತ್ಯಾಧುನಿಕ ಮೂಲಸೌಕರ್ಯವನ್ನು ಒದಗಿಸಿ ಮತ್ತು ಮಹತ್ವದ ಸಾಧನೆ ಮಾಡಿ ಒಂದು ಉತ್ತಮ ಸಂಸ್ಥೆ ಎಂದು ಕರೆಯಲ್ಪಟ್ಟಿದೆ. ಈ ಮಾನ್ಯತೆಯನ್ನು ಪಡೆದ ಭಾರತದ ಕೆಲವೇ ಸಂಸ್ಥೆಗಳಲ್ಲಿ ಒಂದಾಗಿದೆ ಎಂದು ಪ್ರಕಟಣೆ ತಿಳಿಸಿದೆ.